# ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ – ಬೆಂಗಳೂರು

## ಅಧಿಸೂಚನೆ ಸಂಖ್ಯೆ ಕೆಇಆರ್‌ಸಿ/ವಿನಿಯಮಗಳು/ಎಫ್/ಡಿ/07/4 ದಿನಾಂಕ 28.9.2004

## ಕ.ವಿ.ನಿ.ಆ. (ಕೋರಿಕೆ ಮೇರೆಗೆ ವಿದ್ಯುತ್ ಸರಬರಾಜಿಗಾಗಿ ಲೈಸೆನ್ಸುದಾರರ ಕರ್ತವ್ಯಗಳು) ವಿನಿಯಮಗಳು, 2004

ಪೀಠಿಕೆ :

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು, ವಿದ್ಯುಚ್ಛಕ್ತಿ ಅಧಿನಿಯಮ, 2003 (ಅಧಿನಿಯಮ 2003 ರ 36)ರ 43ನೇಯ ಪ್ರಕರಣದ ಉಪ ಪ್ರಕರಣ (1) ರೊಂದಿಗೆ ಓದಲಾದ 181 ನೆಯ ಪ್ರಕರಣದ ಉಪ ಪ್ರಕರಣ (2) ರ (ಟಿ) ಕಂಡಿಕೆಯಿಂದ ಮತ್ತು ಅದರ ಪರವಾಗಿ ಸಮರ್ಥಿಸುವ ಎಲ್ಲಾ ಅಧಿಕಾರಗಳನ್ನು ಚಲಾಯಿಸಿ, ಮುಂದಿನ ವಿನಿಯಮಗಳನ್ನು ರಚಿಸಿದೆ. ಅದು ಇಂತಿದೆ:

1 ಸಂಕ್ಷಿಪ್ತ ಹೆಸರು, ಪ್ರಾರಂಭ ಮತ್ತು ವ್ಯಾಖ್ಯಾನ

ಎ) ಈ ವಿನಿಯಮಗಳನ್ನು ಕ.ವಿ.ನಿ.ಆ (ಕೋರಿಕೆ ಮೇರೆಗೆ ವಿದ್ಯುತ್ ಸರಬರಾಜಿಗಾಗಿ ಲೈಸೆನ್ಸುದಾರರ ಕರ್ತವ್ಯ) ವಿನಿಯಮಗಳು, 2004 ಎಂದು ಕರೆಯತಕ್ಕದ್ದು.

ಬಿ) ಅದು ಆಯೋಗವು ಕರ್ನಾಟಕ ಸರ್ಕಾರದ ಅಧಿಕೃತ ರಾಜ್ಯಪತ್ರದಲ್ಲಿ ಅಧಿಸೂಚಿಸಿದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

ಸಿ) ಅದು ಇಡೀ ಕರ್ನಾಟಕ ರಾಜ್ಯಾದ್ಯಂತ ವ್ಯಾಪ್ತಗೊಳ್ಳತಕ್ಕದ್ದು.

2 ಪರಿಭಾಷೆಗಳು :

ಈ ವಿನಿಯಮಗಳಲ್ಲಿ ಅನ್ಯಥಾ ಸಂದರ್ಭವನ್ನು ಅಗತ್ಯ ಪಡಿಸುವುದನ್ನು ಹೊರತುಪಡಿಸಿ :-

ಎ) ಅಧಿನಿಯಮವೆಂದರೆ ವಿದ್ಯುಚ್ಛಕ್ತಿ ಅಧಿನಿಯಮ, 2003 (2003 ರ 36) ಎಂದು ಅರ್ಥ.

ಬಿ) ಆಯೋಗವೆಂದರೆ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ.

ಸಿ) ಅರ್ಜಿದಾರ ಎಂದರೆ, ವಿದ್ಯುತ್ ಸರಬರಾಜಿಗಾಗಿ ವಿತರಣ ಲೈಸೆನ್ಸುದಾರನಲ್ಲಿ ಅರ್ಜಿ ಸಲ್ಲಿಸುವ ಯಾವುದೇ ಸ್ಥಳದ ಮಾಲೀಕ ಅಥವಾ ಅನುಭೋಗದಾರ.

ಡಿ) ವಿತರಣ ಲೈಸೆನ್ಸುದಾರ ಎಂದರೆ ತನ್ನ ಸರಬರಾಜು ಪ್ರದೇಶದಲ್ಲಿ ಗ್ರಾಹಕರಿಗೆ ವಿದ್ಯುತ್ ಸರಬರಾಜು ಮಾಡಲು ವಿತರಣ ಪದ್ಧತಿಯ ಕಾರ್ಯಪಾಲನೆ ಮತ್ತು ನಿರ್ವಹಿಸಲು ಪ್ರಾಧಿಕೃತಗೊಂಡಿರುವ ಲೈಸೆನ್ಸುದಾರ.

ಇ) ವಿತರಣ ಮುಖ್ಯವೆಂದರೆ ಕೂಡಲೆ ಸಂಪರ್ಕಗೊಳಿಸಲು ಸೇವಾ ಮಾರ್ಗ ಅಥವಾ ಉದ್ದೇಶಿಸಲಿರುವುದರೊಂದಿಗೆ ಯಾವುದೇ ಮುಖ್ಯದ ಭಾಗ.

ಎಫ್) ವಿದ್ಯುತ್ ಮಾರ್ಗವೆಂದರೆ, ಯಾವುದೇ ಉದ್ದೇಶಕ್ಕಾಗಿ ವಿದ್ಯುತ್ ರವಾನಿಸಲು ಬಳಸುವ ಯಾವುದೇ ಮಾರ್ಗ ಮತ್ತು ಮುಂದಿನದನ್ನು ಒಳಗೊಳ್ಳುತ್ತದೆ.

1. ಅಂತಹ ಯಾವುದೇ ಮಾರ್ಗಕ್ಕಾಗಿ ಯಾವುದೇ ಬೆಂಬಲಿತವಾಗಿರುವ ಯಾವುದೇ ಸ್ವರೂಪ, ಗೋಪುರ, ಕಂಬ ಅಥವಾ ಅದರೊಳಗಿನ, ಮೇಲೆ, ಅದಕ್ಕಾಗಿ ಅಥವಾ ಅದರಿಂದ ಇರುವ ಯಾವುದೇ ಅಂತಹ ಮಾರ್ಗವಿರುವ ಅಥವಾ ಬೆಂಬಲಿತ, ಮಾಡದ ಅಥವಾ ತಡೆದಿರಬಹುದಾದ; ಮತ್ತು,
2. ವಿದ್ಯುತ್ ಸಾಗಣೆ ಉದ್ದೇಶಕ್ಕಾಗಿ ಯಾವುದೇ ಅಂತಹ ಮಾರ್ಗಕ್ಕೆ ಕೇಬಲ್ಲಿಗೆ ಸಂಪರ್ಕಿತವಾದ ಯಾವುದೇ ಸಲಕರಣೆಗಳು.

ಜಿ) ವಿದ್ಯುತ್ ಘಟಕವೆಂದರೆ ಯಾವುದೇ ಘಟಕ, ಉಪಕರಣ, ಸಲಕರಣೆ ಅಥವಾ ಅನ್ವಯಿಕಗಳು ಅಥವಾ ಅದರಿಂದ ಯಾವುದೇ ಭಾಗಕ್ಕೆ ಬಳಸಿದ, ಅಥವಾ ವಿದ್ಯುತ್ ಉತ್ಪಾದನೆ, ಪ್ರಸರಣ, ವಿತರಣೆ ಅಥವಾ ವಿದ್ಯುತ್ ಸರಬರಾಜಿಗೆ ಸಂಪರ್ಕಿತಗೊಂಡಿರುವುದಕ್ಕೆ ಆದರೆ ಈ ಮುಂದಿನವು ಒಳಗೊಂಡಿರದೆ ಇರುವುದಕ್ಕೆ ವಿದ್ಯುತ್ ಘಟಕ ಎಂದು ಅರ್ಥ:

1. ವಿದ್ಯುತ್ ಮಾರ್ಗ/ಕೇಬಲ್ಲು ಅಥವಾ

2. ಯಾವುದೇ ಪ್ರದೇಶಕ್ಕೆ ವಿದ್ಯುತ್ ಸರಬರಾಜಾದ ಪ್ರಮಾಣ ಖಚಿತ ಪಡಿಸುವುದಕ್ಕಾಗಿ ಬಳಸಿದ ಮಾಪಕ, ಅಥವಾ

3. ಗ್ರಾಹಕನ ನಿಯಂತ್ರಣದಲ್ಲಿರುವ ವಿದ್ಯುತ್ ಉಪಕರಣ, ಯಂತ್ರೋಪಕರಣ ಅಥವಾ ಸಲಕರಣೆಗಳು.

ಎಚ್) ಅಧಿಕ ವಿದ್ಯುತ್ ಒತ್ತಡ (ಎಚ್.ಟಿ) ಗ್ರಾಹಕ ಎಂದರೆ ಗ್ರಾಹಕನಿಗೆ ಸಾಧಾರಣ ವೋಲ್ಟೇಜಿನ 650 ವೋಲ್ಟ್‌ಗಿಂತ ಹೆಚ್ಚಿನ ಮತ್ತು 33,000 ವೋಲ್ಟ್‌ವರೆಗಿನ ವೋಲ್ಟೇಜಿನಲ್ಲಿ ವಿದ್ಯುತ್ ಸರಬರಾಜಾಗುತ್ತಿರುವುದು ಎಂದು ಅರ್ಥ.

ಐ) ಅಲ್ಪ ವಿದ್ಯುತ್ ಒತ್ತಡ (ಎಲ್.ಟಿ) ಗ್ರಾಹಕ ಎಂದರೆ ಗ್ರಾಹಕನಿಗೆ 415 ವೋಲ್ಟ್ ಮೂರು ಫೇಸು ಅಥವಾ 240 ವೋಲ್ಟ್ ಸಿಂಗಲ್ ಫೇಸಿನಲ್ಲಿ.

ಜೆ) ವಿಶೇಷಾಧಿಕ ಪ್ರಮಾಣದ ವೋಲ್ಟೇಜು (ಇ.ಎಚ್.ಟಿ) ಗ್ರಾಹಕ ಎಂದರೆ ಗ್ರಾಹಕನಿಗೆ 33,000 ವೋಲ್ಟ್‌ಗಿಂತ ಹೆಚ್ಚಿನ ವೋಲ್ಟೇಜಿನಲ್ಲಿ ವಿದ್ಯುತ್ ಸರಬರಾಜಾಗುತ್ತಿರುವುದು ಎಂದು ಅರ್ಥ.

ಕೆ) ಕೆಇಆರ್ ಅಧಿನಿಯಮ ಎಂದರೆ ಕರ್ನಾಟಕ ವಿದ್ಯುಚ್ಛಕ್ತಿ ಸುಧಾರಣ ಅಧಿನಿಯಮ, 1999;

ಎಲ್) ತಿಂಗಳು ಎಂದರೆ ಕ್ಯಾಲೆಂಡರ್ ತಿಂಗಳು ಬಿಲ್ಲಿಂಗ್ ಉದ್ದೇಶಕ್ಕಾಗಿ ತಿಂಗಳೆಂದು ಪರಿಗಣಿಸಬೇಕಾದ ನಿರಂತರವಾಗಿ ಎರಡು ಮಾಪಕ ವಾಚನಗಳ ನಡುವಿನ ಸುಮಾರು 30 ದಿನಗಳ ಅವಧಿ;

ಎಂ) ಪ್ರದೇಶವು, ಯಾವುದೇ ಜಮೀನು, ಕಟ್ಟಡ ಅಥವಾ ನಿರ್ಮಾಣ;

ಎನ್) ಸೇವಾ ಮಾರ್ಗ ಎಂದರೆ ಯಾವುದೇ ವಿದ್ಯುತ್ ಸರಬರಾಜು ಮಾರ್ಗದ ಮೂಲಕ ವಿದ್ಯುತ್ತಿರುವ ಅಥವಾ ಸರಬರಾಜು ಮಾಡಲು ಉದ್ದೇಶಿಸಿರುವುದು;

i) ವಿತರಣ ಲೈಸೆನ್ಸುದಾರರ ಪ್ರದೇಶದಿಂದ ಕೂಡಲೇ ಅಥವಾ ವಿತರಣ ಮುಖ್ಯದಿಂದ – ಎರಡರ ಪೈಕಿ ಒಂದರಿಂದ ಓರ್ವ ಗ್ರಾಹಕನಿಗೆ.

ii) ವಿತರಣ ಮುಖ್ಯದಿಂದ ಒಂದೇ ಪ್ರದೇಶದ ಗ್ರಾಹಕ ತಂಡಕ್ಕೆ ಅಥವಾ ವಿತರಣ ಮುಖ್ಯದಿಂದ ಅದೇ ಬಿಂದುವಿನಿಂದ ಪಕ್ಕದಲ್ಲಿಯೇ ಇರುವ ಜಾಗಕ್ಕೆ ಸರಬರಾಜಾಗಿದ್ದು ಎಂದು ಅರ್ಥ.

ಒ) ಪ್ರಸರಣ ಲೈಸೆನ್ಸುದಾರ ಎಂದರೆ ಪ್ರಸರಣ ಮಾರ್ಗಗಳನ್ನು ಸ್ಥಾಪಿಸುವ ಅಥವಾ ನಿರ್ವಹಿಸಲು ಪ್ರಾಧಿಕೃತಗೊಂಡಿರುವ ಲೈಸೆನ್ಸುದಾರ.

ಪಿ) ವೋಲ್ಟೇಜ್ ಎಂದರೆ ಸೂಕ್ತ ವೋಲ್ಟಾ ಮೀಟರಿನಿಂದ ಭೂಮಿ ಮತ್ತು ತಂತಿಯ ಯಾವುದೇ ಭಾಗದ ನಡುವಣ ಅಥವಾ ಯಾವುದೇ ಎರಡು ತಂತಿಗಳ ನಡುವೆ ವೋಲ್ಟ್‌ನಲ್ಲಿ ಅಳೆದ ವಿದ್ಯುತ್ ಸಾಮರ್ಥ್ಯದ ವ್ಯತ್ಯಾಸ.

ಈ ವಿನಿಯಮಗಳಲ್ಲಿ ಬಳಸಿರುವ ಪದಗಳು ಮತ್ತು ಪದಾವಳಿಗಳು ಹಾಗೂ ಅವುಗಳನ್ನು ಪರಿಭಾಷಿಸದಿದ್ದರೂ, ಅಧಿನಿಯಮ / ಕ.ವಿ.ಸು. ಅಧಿನಿಯಮಗಳಲ್ಲಿ ನಿಗದಿಪಡಿಸಿರುವ ಅರ್ಥಗಳನ್ನು ಹೊಂದಿರತಕ್ಕದ್ದು. ಅಧಿನಿಯಮ ಮತ್ತು ಕ.ವಿ.ಸು. ಅಧಿನಿಯಮಗಳಲ್ಲಿ ಬಳಕೆಯಾಗಿರುವ ಪದಗಳು ಮತ್ತು ಪದಾವಳಿಗಳಲ್ಲಿ ಅಸಂಗತೆ ಉಂಟಾದ ಪ್ರಕರಣದಲ್ಲಿ, ಅಧಿನಿಯಮದಲ್ಲಿರುವ ಉಪಬಂಧಗಳು ಯಾವಾಗಲೂ ಬಳಕೆಯಲ್ಲಿರತಕ್ಕದ್ದು.

3. **ಕೋರಿಕೆಯ ಮೇರೆಗೆ ವಿದ್ಯುತ್ ಸರಬರಾಜು ಮಾಡಬೇಕಾದ ಲೈಸೆನ್ಸುದಾರರ ಕರ್ತವ್ಯ.**

ಪ್ರದೇಶದ ಮಾಲೀಕ ಅಥವಾ ಅನುಭೋಗದಾರನು ವಿದ್ಯುತ್ ಸರಬರಾಜಿಗಾಗಿ ಅರ್ಜಿಯನ್ನು ವಿತರಣ ಲೈಸೆನ್ಸುದಾರರಲ್ಲಿ ಸಲ್ಲಿಸಬೇಕು. ಲೈಸೆನ್ಸುದಾರನು ಅಧಿಸೂಚಿಸಿದಂತೆ ನಿಗದಿತ ಶುಲ್ಕ ಮತ್ತು ದರಗಳನ್ನು ಅರ್ಜಿಯ ನಕಲಿನೊಂದಿಗೆ ಸಲ್ಲಿಸಬೇಕು. ಲೈಸೆನ್ಸುದಾರನು ಅರ್ಜಿಯನ್ನು ಸ್ವೀಕರಿಸಿ, ಅದರ ನಕಲಿನಲ್ಲಿ ಸ್ವೀಕೃತಿ ಮತ್ತು ಮೊಹರುಹಾಕಿ ಹಿಂತಿರುಗಿಸಬೇಕು ಹಾಗೂ ಈ ವಿನಿಯಮಗಳ ಉಪಬಂಧಗಳನ್ನು ಅರ್ಜಿದಾರನು ತಿಳಿಯುವ ಹಾಗೆ ಮಾಡಬೇಕು. ಈ ಉಪಬಂಧಗಳು ವೋಲ್ಟೇಜಿನ ಹಂತದಲ್ಲಿ ಹಾಲಿಯಿರುವ ಲೋಡನ್ನು ಜಾಸ್ತಿಮಾಡಲು ಮತ್ತು ಬದಲಾಯಿಸಲು ಅಗತ್ಯವಿರುವ ಪ್ರಕರಣಗಳಿಗೆ ಕೂಡ ಅನ್ವಯವಾಗುತ್ತವೆ.

3.1 ಪ್ರತಿ ವಿತರಣ ಲೈಸೆನ್ಸುದಾರರು ವಿತರಣ ಮುಖ್ಯದ ವಿಸ್ತರಣೆ ಅಥವಾ ಹೊಸ ಉಪಕೇಂದ್ರಗಳ ನಿರ್ಮಾಣದ ಅಗತ್ಯವಿಲ್ಲದ ಕಡೆಯಲ್ಲಿ, ಅರ್ಜಿ ಸ್ವೀಕರಿಸಿದ ಒಂದು ತಿಂಗಳೊಳಗಾಗಿ ವಿದ್ಯುತ್ ಸರಬರಾಜು ಒದಗಿಸತಕ್ಕದ್ದು.

3.2 ವಿತರಣ ಜಾಲದ ವಿಸ್ತರಣೆ ಅಗತ್ಯ ಪಡಿಸುವ ಅಂತಹ ವಿದ್ಯುತ್ ಸರಬರಾಜಿಗೆ ಕೋರಿರುವ ಅರ್ಜಿಗಳ ಪ್ರಕರಣದಲ್ಲಿ, ಈ ಮುಂದೆ ನಿರ್ದಿಷ್ಟಪಡಿಸಿರುವ ಕಾಲ ಮಿತಿಯೊಳಗೆ ಅಂತಹ ಪ್ರದೇಶಕ್ಕೆ ವಿತರಣ ಜಾಲದ ವಿಸ್ತರಣೆಗೆ ಮತ್ತು ವಿತರಣ ಲೈಸೆನ್ಸುದಾರರು ವಿದ್ಯುತ್ ಸರಬರಾಜು ನೀಡಲು ವ್ಯವಸ್ಥೆಮಾಡಬೇಕು.

| ವಿದ್ಯುತ್ ಸಂಪರ್ಕ ಕೋರಿರುವ ಮಾದರಿ | ಅರ್ಜಿ ಸ್ವೀಕರಿಸಿದ ದಿನಾಂಕದಿಂದ ಅವಧಿಯೊಳಗೆ ವಿದ್ಯುತ್ ಸರಬರಾಜು ಒದಗಿಸಬೇಕು. |
|---|---|
| ಕಡಿಮೆ ಒತ್ತಡದ (ಎಲ್.ಟಿ) ಸರಬರಾಜು | 45 ದಿನಗಳು |
| 11 ಕೆ.ವಿ. ಸರಬರಾಜು | 60 ದಿನಗಳು |
| 33 ಕೆ.ವಿ. ಸರಬರಾಜು | 90 ದಿನಗಳು |
| ಅತ್ಯಧಿಕ ಒತ್ತಡದ (ಇ.ಎಚ್.ಟಿ) ಸರಬರಾಜು | 180 ದಿನಗಳು |

3.3 ಹೊಸ ಸಂಪರ್ಕ ಕೋರಿರುವ ಅರ್ಜಿಯ ಪ್ರಕರಣದಲ್ಲಿ, ಸರಬರಾಜಿನ ವಿಸ್ತರಣೆ ಮಾಡುವುದು ಮತ್ತು ಹೊಸ ಉಪಕೇಂದ್ರದ ನಿರ್ಮಾಣದ ಅಗತ್ಯವಿದ್ದಲ್ಲಿ ಹಾಗೂ ಅಂತಹ ಕಾಮಗಾರಿಗಳು ಆಯೋಗದಿಂದ ಅನುಮೋದಿತವಾದ ಹೂಡಿಕಾ ಯೋಜನೆಯಂತೆ, ಈಗಾಗಲೇ ಲೈಸೆನ್ಸುದಾರನು ಆಯೋಗವು ಅನುಮೋದಿಸಿದ ಅವಧಿಯೊಳಗೆ ಪೂರ್ಣಗೊಳಿಸಿ, ಅರ್ಜಿದಾರನಿಗೆ ವಿದ್ಯುತ್ ಸರಬರಾಜು ಪ್ರಾರಂಭಿಸಬೇಕು. ಆಯೋಗದ ಹೂಡಿಕಾ ಯೋಜನೆಯಲ್ಲಿ ಉಪ ಕೇಂದ್ರದ ನಿರ್ಮಾಣವು ಸೇರಿಲ್ಲದಿದ್ದಲ್ಲಿ, ವಿತರಣಾ ಲೈಸೆನ್ಸುದಾರನು ಅರ್ಜಿ ಸ್ವೀಕರಿಸಿದ 15 ದಿನಗಳ ಒಳಗಾಗಿ, ಅಗತ್ಯವಿರುವ ಉಪಕೇಂದ್ರದ ನಿರ್ಮಾಣಕ್ಕೆ ಬೇಕಾದ ಕಾಲಾವಕಾಶದೊಳಗೆ ಉಪಕೇಂದ್ರ ನಿರ್ಮಾಣದ ಪ್ರಸ್ತಾವನೆಯನ್ನು ಆಯೋಗದ ಅನುಮೋದನೆಗಾಗಿ ಸಲ್ಲಿಸಬೇಕು. ಲೈಸೆನ್ಸುದಾರನು, ಆಯೋಗ ಅನುಮೋದಿಸಿದ ಅವಧಿಯೊಳಗೆ ಕಾಮಗಾರಿಯನ್ನು ಪೂರ್ಣಗೊಳಿಸಿ ಅರ್ಜಿದಾರನಿಗೆ ವಿದ್ಯುತ್ ಸರಬರಾಜು ಮಾಡುವುದನ್ನು ಪ್ರಾರಂಭಿಸಬೇಕು.

3.4 ಸ್ವಯಂ ಕಾರ್ಯ ನಿರ್ವಹಣಾ ಆಧಾರದ ಮೇಲೆ ವಿತರಣಾ ಮುಖ್ಯದ ಮಾರ್ಗ ವಿಸ್ತರಣೆ ಇತ್ಯಾದಿಗಳನ್ನು ಕೈಗೊಂಡ ಪ್ರಕರಣಗಳಲ್ಲಿ, ವಿತರಣಾ ಲೈಸೆನ್ಸುದಾರನು ವಿದ್ಯುತ್ ಸರಬರಾಜು ಪಡೆಯಲು ಸಿದ್ಧವಾಗಿರುವುದು ಮತ್ತು ಎಲ್ಲಾ ಶಾಸನೀಯ ಅನುಮೋದನೆಗಳ ಮಾಹಿತಿಗೆ ಸಂಬಂಧಿಸಿದಂತೆ ಗ್ರಾಹಕನಿಂದ ತಿಳುವಳಿಕೆ ಸ್ವೀಕರಿಸಿದ ದಿನಾಂಕದಿಂದ 15 ದಿನಗಳೊಳಗಾಗಿ ವಿದ್ಯುತ್ ಸರಬರಾಜು ಒದಗಿಸಬೇಕು.

3.5 ಈ ಮೇಲಿನ ಉಪ ಕಂಡಿಕೆ 3.2 ರಲ್ಲಿ ನಿರ್ದಿಷ್ಟ ಪಡಿಸಿದ ಕಾಲದ ಚೌಕಟ್ಟಿನಲ್ಲಿ ಅಗತ್ಯವಿರುವ 33 ಸಾವಿರ ವೋಲ್ಟ್‌ಗಿಂತಲೂ ಹೆಚ್ಚಿನ ಅತ್ಯಧಿಕ ಒತ್ತಡದ ವಿದ್ಯುತ್ತನ್ನು ಲಭ್ಯವಾಗುವಂತೆ ಮಾಡುವುದಕ್ಕೆ ಸಂಬಂಧಿಸಿದ ಪ್ರಸರಣಾ ಲೈಸೆನ್ಸುದಾರ(ರು) ಜೊತೆಗೆ ಅಗತ್ಯವಾದ ವಾಣಿಜ್ಯಾತ್ಮಕ ವ್ಯವಸ್ಥೆಗಳನ್ನು ಮಾಡಿಕೊಳ್ಳುವುದು ವಿತರಣಾ ಲೈಸೆನ್ಸುದಾರನ ಜವಾಬ್ದಾರಿಯಾಗಿರತಕ್ಕದ್ದು.

3.6 ಲೈಸೆನ್ಸುದಾರರು ಗ್ರಾಮೀಣ ವಿದ್ಯುದೀಕರಣದ ಪ್ರಕರಣಗಳಲ್ಲಿ, ವಿದ್ಯುಚ್ಛಕ್ತಿ ಅಧಿನಿಯಮ 2003ರ ಪ್ರಕರಣ 5ರಲ್ಲಿ ಹೇಳಿರುವಂತೆ ಗ್ರಾಮೀಣ ವಿದ್ಯುದ್ದೀಕರಣದ ರಾಷ್ಟ್ರೀಯ ನೀತಿಯನ್ನು ಅನುಸರಿಸಬೇಕು.

4. ಕರ್ತವ್ಯ ಲೋಪದಿಂದಾಗುವ ಪರಿಣಾಮಗಳು :

4.1 ಮೇಲಿನ ಕಂಡಿಕೆ 3ರಲ್ಲಿ ವಿಧಿಸಿದಂತೆ, ವಿದ್ಯುತ್ ಸರಬರಾಜನ್ನು ಕಾಲದ ಮಿತಿಯೊಳಗೆ ಪೂರೈಸಲು ವಿಫಲವಾಗುವ ವಿತರಣಾ ಲೈಸೆನ್ಸುದಾರರು, ಕವಿನಿಆ (ಲೈಸೆನ್ಸುದಾರರ ಕಾರ್ಯನಿರ್ವಹಣಾ ಗುಣಮಟ್ಟಗಳು) ವಿನಿಯಮಗಳು, 2004ರಲ್ಲಿ ಆಯೋಗವು ನಿರ್ದಿಷ್ಟಪಡಿಸಿದಂತೆ ದಂಡದ ಮೊತ್ತವನ್ನು ಅರ್ಜಿದಾರನಿಗೆ ಸಂದಾಯ ಮಾಡಲು ಬಾಧ್ಯನಾಗತಕ್ಕದ್ದು. ಲೈಸೆನ್ಸುದಾರರು ವಿದ್ಯುತ್ ಸರಬರಾಜು ಮಂಜೂರು ಮಾಡಿದ ಪತ್ರ ನೀಡಿದ್ದ ಪ್ರಕರಣದಲ್ಲಿ, ಅದರ ಲೈಸೆನ್ಸುದಾರರಿಂದ ವಿದ್ಯುತ್ ಸರಬರಾಜು ಪಡೆಯಲು ಅರ್ಜಿದಾರರು ವಿಫಲರಾದಲ್ಲಿ ಕಂಡಿಕೆ 3 ರಲ್ಲಿ ವಿಧಿಸಿದಂತೆ ಲೈಸೆನ್ಸುದಾರನು ದಂಡ ಸಂದಾಯ ಮಾಡುವ ಜವಾಬ್ದಾರಿ ರದ್ದಾಗುತ್ತದೆ ಮತ್ತು ಅರ್ಜಿಯನ್ನು ರದ್ದುಗೊಳಿಸಲಾಗಿದೆ ಎಂದು ಭಾವಿಸಲಾಗುತ್ತದೆ.

4.2 ವಿದ್ಯುತ್ ಸರಬರಾಜಿಗಾಗಿ ಅರ್ಜಿ ಸ್ವೀಕರಿಸಿದ ವಿತರಣಾ ಲೈಸೆನ್ಸುದಾರನು ವಿದ್ಯುತ್ ಮಂಜೂರಾತಿ ಪತ್ರ ನೀಡಿ, ಅರ್ಜಿದಾರನಿಂದ ಅಗತ್ಯವಿರುವ ಒಪ್ಪಂದ ಮಾಡಿಕೊಂಡ ನಂತರ, ಕಂಡಿಕೆ 3 ರಲ್ಲಿ ವಿಧಿಸಿರುವ ಸಮಯದೊಳಗೆ ವಿದ್ಯುತ್ ಸರಬರಾಜು ಪಡೆಯಲು ಅರ್ಜಿದಾರನು ವಿಫಲನಾದಲ್ಲಿ ಕಂಡಿಕೆ 3 ರಲ್ಲಿ ನಮೂದಿಸಿರುವ ಸಮಯದೊಳಗೆ ಸ್ಥಾಪನಕ್ಕೆ ವಿದ್ಯುತ್ ಪೂರೈಸಲಾಗಿದೆ ಎಂದು ಭಾವಿಸತಕ್ಕದ್ದು ಹಾಗೂ ಗ್ರಾಹಕನು ಪ್ರಾರಂಭಿಕ ಒಪ್ಪಂದದ ಅವಧಿಯಲ್ಲಿ ಜಾರಿಯಲ್ಲಿರುವ ವಿದ್ಯುತ್ ದರದಂತೆ ಬೇಡಿಕೆ ಶುಲ್ಕ/ನಿಗದಿತ ಶುಲ್ಕಗಳನ್ನು ಪಾವತಿಸಲು ಬದ್ಧನಾಗಿರತಕ್ಕದ್ದು.

5. **ಅನಿವಾರ್ಯ ಘಟನೆ :**

ಯುದ್ಧ, ದಂಗೆ, ನಾಗರೀಕ ಕ್ಷೋಭೆ, ಹಿಂಸೆ, ಪ್ರವಾಹ, ಚಂಡಮಾರುತ ಮಿಂಚು, ಭೂಕಂಪ ಅಥವಾ ಇತರ ಅದೇ ರೀತಿಯ ಘಟನಾವಳಿಗಳೊಳಗೊಂಡಂತೆ ವಿತರಣಾ ಲೈಸೆನ್ಸುದಾರನ ಯುಕ್ತ ನಿಯಂತ್ರಣಕ್ಕೆ ಮೀರಿದ ಘಟನೆಗಳು ಮತ್ತು ಲೈಸೆನ್ಸುದಾರನ ಸ್ಥಾಪನ ಮತ್ತು ಚಟುವಟಿಕೆಗಳಿಗೆ ಬಾಧಕವಾಗುವ ಮುಷ್ಕರ, ಲಾಕೌಟ್, ಬೆಂಕಿಗಳಿಂದ ನಿಯಂತ್ರಿಸಲಾಗದಂತಹ ಅನಿವಾರ್ಯ ಸಂದರ್ಭಗಳಲ್ಲಿ ಈ ಮೇಲಿನ 3 ನೆಯ ಕಂಡಿಕೆಯಲ್ಲಿ ನಿರ್ದಿಷ್ಟಪಡಿಸಿದ ಕಾಲದ ಮಿತಿಯು ಆಚರಣೆಯಲ್ಲಿರುವುದಿಲ್ಲ.

6 ಉಳಿತಾಯ : ಗ್ರಾಹಕ ಹಿತರಕ್ಷಣಾ ಅಧಿನಿಯಮ, 1986 (1986 68) ಸೇರಿದಂತೆ ಜಾರಿಯಲ್ಲಿರುವ ಯಾವುದೇ ಇತರ ಕಾನೂನುಗಳಿಂದ ಗ್ರಾಹಕರ ಹಕ್ಕು ಮತ್ತು ವಿಶೇಷಾಧಿಕಾರಗಳಿಗೆ ಈ ವಿನಿಯಮಗಳಲ್ಲಿರುವ ಅಂಶಗಳಿಂದ ಬಾಧಕವಾಗತಕ್ಕದ್ದಲ್ಲ.

7. ತಿದ್ದುಪಡಿಯ ಅಧಿಕಾರ : ಆಯೋಗವು, ಯಾವುದೇ ಸಮಯದಲ್ಲಿ, ಈ ವಿನಿಯಮಗಳ, ಯಾವುದೇ ಉಪಬಂಧಗಳಿಗೆ ಸೇರಿಸುವ, ಬದಲಾಯಿಸುವ, ಮಾರ್ಪಡಿಸುವ ಅಥವಾ ತಿದ್ದುಪಡಿ ಮಾಡಬಹುದಾಗಿದೆ.

ಆಯೋಗದ ಆದೇಶದ ಮೇರೆಗೆ,

ಕಾರ್ಯದರ್ಶಿ,

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ